ಇ) ಈ ಕೆಲಸ ಪೂರ್ಣಗೊಳಿಸಲು ಕನಿಷ್ಟ ಎರಡು ವರ್ಷಗಳ ಅವಧಿ ಬೇಕಾಗುತ್ತದೆ.

ಹುಬ್ಬಳ್ಳಿ-ಧಾರವಾಡದಲ್ಲಿ ಸಾರ್ವಜನಿಕರಿಗೆ ವಿಶ್ರಾಂತಿ ತಾಣ ನಿರ್ಮಾಣ

931 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ರಾಮಾಪುರ ಅಥವಾ ಪುತ್ತೂರು ಗುಡ್ಡಗಳಲ್ಲಿ ನಗರದ ಚಿಕ್ಕ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ವಿಶ್ರಾಂತಿ ತಾಣ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೆ?

ಆ) ಇದ್ದರೆ ಯೋಜನೆಯ ರೂಪರೇಷೆಗಳು ಏನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಂತಹ ಯೋಜನೆ ಅರಣ್ಯ ಇಲಾಖೆಯಲ್ಲಿ ಇರುವುದಿಲ್ಲ. ಉದ್ಯಾನವನ ನಿರ್ಮಿಸುವ ವಿಷಯವು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿರುತ್ತದೆ. ಆದರೆ ರಾಮಾಪುರ ಅಥವಾ ಸತ್ತೂರು ಗುಡ್ಡಗಳು ಅರಣ್ಯ ಪ್ರದೇಶವಾಗಿರುವುದರಿಂದ ಅದನ್ನು ಬಿಡುಗಡೆ ಮಾಡಲು ತೋಟಗಾರಿಕೆ ಇಲಾಖೆಯಿಂದ ಬೇಡಿಕೆ ಬಂದಲ್ಲಿ ನಿಯಮಾನುಸಾರ ಪರಿಸೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ

ಹುಬ್ಬಳ್ಳಿ - ಧಾರವಾಡ ಮಹಾನಗರದ ಅಭಿವೃದ್ಧಿಗೆ ಖರ್ಚಾದ ಹಣ

929 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ -ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ 1990-91ನೇ ಸಾಲಿನಿಂದ ಇಲ್ಲಿಯವರೆಗೆ ಮಹಾನಗರ ಅಭಿವೃದ್ಧಿ ಸಲುವಾಗಿ ಖರ್ಚು ಮಾಡಿದ ಹಣ ಎಷ್ಟು?

ಆ) ಯಾವ ಯಾವ ಕೆಲಸದ ಸಲುವಾಗಿ ಖರ್ಚು ಮಾಡಲಾಗಿದೆ ಅದರ ಸಂಪೂರ್ಣ ವಿವರ ಒದಗಿಸುವುದು.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 1990-91 ರಿಂದ 1994-95ರ ಕೊನೆಯವರೆಗೆ ಪ್ರಾಧಿಕಾರ ಮಹಾನಗರದ ಅಭಿವೃದ್ಧಿಗಾಗಿ ಮಾಡಿದ ಖರ್ಚಿನ ವಿವರಗಳು ಈ ಕೆಳಗಿನಂತಿದೆ.

1)	1990-91	ಇಲ್ಲ
2)	1991-92	ಇಲ್ಲ
3)	1992-93	31.37 ಲಕ್ಷ
4)	1993-94	44.71 ಲಕ್ಷ
5)	1994-95	36.18 ಲಕ್ಷ
	ಒಟ್ಟು	112.26 ಲಕ್ಷ

ಆ) ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿನ ಸ್ಮಶಾನ, ಉದ್ಯಾನ, ವೃತ್ತ ಹಾಗೂ ಕಟ್ಟಡಗಳಿಗೆ ಪ್ರತಿ ವರ್ಷ ಮಾಡಲಾದ ವೆಚ್ಚದ ವಿವರಗಳನ್ನು ಅನುಬಂಧ ಎ ಮತ್ತು ಬಿರಲ್ಲಿ ನೀಡಲಾಗಿದೆ.